ಕಾಮಗಾರಿಗಳು ಮುಗಿದ ನಂತರ' ಎಂದು ಉತ್ತರ ಕೊಟ್ಟಿದ್ದಾರೆ. ಎಂದರೆ ಅದಕ್ಕೆ ಕಟ್ಟಡ ಪ್ರಾರಂಭ ಮಾಡಿದ್ದಾರೆಯೇ ?

ಶ್ರೀ ಜಿ. ರಾಮಕೃಷ್ಣ:– ಮಾನ್ಯ ಅಧ್ಯಕ್ಷರೇ, ನಾವು ಮತ್ತು ಮಾನ್ಯ ಸದಸ್ಯರು 2–3 ದಿವಸಗಳ ಹಿಂದೆ ಹೋಗಿ ನೋಡಿದ್ದೇವೆ. ಅಲ್ಲಿ ಪೋಸ್ಟ್–ಮಾರ್ಟಂ ರೂಮ್ ಇಲ್ಲದೇ ಬಹಳ ತೊಂದರೆ ಇದೆ. ಅದು ಹಳೇ ಬಿಲ್ಡಿಂಗ್ ಇದ್ದು ಬಿದ್ದು ಹೋಗಿದೆ. ಅದರಲ್ಲಿ ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಹೊಸ ಬಿಲ್ಡಿಂಗ್ ಮಾಡಿದ ಮೇಲೆ ಶಿಫ್ಟ್ ಮಾಡಬೇಕಾಗುತ್ತದೆ. ಈಗ ಯಾವ ವ್ಯವಸ್ಥೆ ಇಲ್ಲ. ಪ್ಲಾನ್ ಮಾಡಿ, ಟೆಕ್ನಿಕಲ್ ಅಪ್ರೂವಲ್, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಬೇಕಾಗುತ್ತದೆ. ಮುಂದಿನ ವರ್ಷದಲ್ಲಿ ಬಡ್ಜೆಟ್ ಬಿಡುಗಡೆ ಮಾಡಿ ಮಂಜೂರಾತಿ ಕೊಟ್ಟು ತಕ್ಷಣ ಆ ಬಿಲ್ಡಿಂಗ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಕಿಡ್ನಿ ಡಯಾಲಿಸಿಸ್ ಘಟಕವು ನಿಷ್ಪ್ರಯೋಜಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟು, ಡಯಾಲಿಸಿಸ್ ಘಟಕದ ಉಪಕರಣವನ್ನು ನಿರ್ವಹಿಸಲು ಅರ್ಹತೆ ಹೊಂದಿದ ವೈದ್ಯರನ್ನು ಕೂಡಲೇ ನಿಯೋಜಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ ಈ ಘಟಕವನ್ನು ಮೊದಲೇ ತೆಗೆದುಕೊಂಡು, ಆಗಿನಿಂದಲೂ ಸೂಕ್ತವಾದ ಡಾಕ್ಟರೆನ್ನು ನೇಮಕ ಮಾಡಿರಲಿಲ್ಲವೇ ?

ಶ್ರೀ ಜಿ. ರಾಮಕೃಷ್ಣ:– ಅಧ್ಯಕ್ಷರೇ ಸದಸ್ಯರು ಹೇಳತಕ್ಕದ್ದು ಸರಿಯಿದೆ. ಈಗ ಒಂದು ವಾರದೊಳಗೆ ಒಬ್ಬ ಎಕ್ಸ್‌ಪರ್ಟ್‌ನ್ನು ನಾವು ಅಪಾಯಿಂಟ್ ಮಾಡುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಹಿಂದೆ ಇದೇ ಸದನದಲ್ಲಿ ಡಯಾಲಿಸಿಸ್ ಎಕ್ವಿಪ್‌ಮೆಂಟ್ ಫೈಲ್ಯೂರ್‌ನಿಂದ ಮತ್ತು ಅದನ್ನು ಸರಿಯಾಗಿ ಉಪಯೋಗ ಮಾಡದೆ ಇರುವುದರಿಂದ ನಮ್ಮ ಶಾಸಕರಿಗೆ ಬಹಳ ತೊಂದರೆಯಾಗಿ ಅವರು ತೀರಿ ಹೋದರು ಎಂದು ಇಲ್ಲಿ ಪ್ರಸ್ತಾಪವಾಗಿತ್ತು. ಇಷ್ಟಾಗಿಯೂ ಕೂಡ ಈ ಡಯಾಲಿಸಿಸ್ ಎಕ್ವಿಪ್‌ಮೆಂಟನ್ನು ಸರಿ ಮಾಡುವುದೂ ಇಲ್ಲ, ಅದಕ್ಕೆ ಸೂಕ್ತವಾದಂತ ಒಂದು ಡಾಕ್ಟರ್ ನೇಮಕ ಮಾಡುವುದೂ ಇಲ್ಲ. ಇಷ್ಟು ದೊಡ್ಡ ಸರ್ಕಾರದ ಆಸ್ಪತ್ರೆಯಲ್ಲಿ ಒಂದು ಸಣ್ಣ ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ ಎಂದರೆ ಇನ್ನು ಏನು ಕೆಲಸ ಮಾಡಲಿಕ್ಕೆ ಆಗುತ್ತದೆಂದು ಜನ ಕೇಳುವುದಿಲ್ಲವೇ ?

ಶ್ರೀ ಜಿ. ರಾಮಕೃಷ್ಣ:– ಅಧ್ಯಕ್ಷರೇ, ಈಗ ತಜ್ಞರು ಇದ್ದಾರೆ ಈಗಾಗಲೇ ನಾನು ಹೇಳಿದ್ದೇನೆ. ಅಲ್ಲಿ ತೊಂದರೆ ಇದ್ದಿದ್ದು ಖರೆ. ಒಂದು ವಾರದೊಳಗೆ ಅದನ್ನು ಸರಿಪಡಿಸುತ್ತೇವೆ.

ಸಿ.ಎಸ್. ಪುರ ಹೋಬಳಿಯ ಇಡಗೂರು ಗ್ರಾಮದ ಅನೇಕ ಹಳ್ಳಿಗಳಲ್ಲಿ ಪಶುವೈದ್ಯಶಾಲೆಗಳು

314 (1492): ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ):–

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನ ಸಿ.ಎಸ್.ಪುರ ಹೋಬಳಿಯ ಇಡಗೂರು ಗ್ರಾಮವು ಅನೇಕ ಹಳ್ಳಿಗಳ ಕೇಂದ್ರವಾಗಿದ್ದು, ಸುಮಾರು 7-8 ಕಿ.ಮೀ. ಆಸುಪಾಸಿನಲ್ಲಿ ಯಾವುದೇ ಪಶುವೈದ್ಯ ಶಾಲೆ ಹಾಗೂ

ಹಾಲಿನ ಡೈರಿ ಇಲ್ಲದಿರುವುದು ಮತ್ತು ಇದರಿಂದ ಅಲ್ಲಿನ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಪಶುವೈದ್ಯ ಶಾಲೆ ಮತ್ತು ಹಾಲಿನ ಡೈರಿಯನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ಮತ್ತು ಪಶುವೈದ್ಯ ಶಾಲೆ ಮತ್ತು ಹಾಲಿನ ಡೈರಿಯನ್ನು ಎಂದು ತೆರೆಯಲಾಗುವುದು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ) ಪಶು ವೈದ್ಯ ಶಾಲೆ ಹಾಗೂ ಹಾಲಿನ ಡೈರಿ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಪ್ರತ್ಯೇಕ ಹಾಲು ಸಂಘವಿರುವುದಿಲ್ಲ. ಈ ಗ್ರಾಮವು ಮಾವಿನಹಳ್ಳಿ ಹಾಲು ಉತ್ಪಾದಕರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ.

ಆ) 1. ಪಶುವೈದ್ಯ ಶಾಲೆ ತೆರೆಯುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

2. ಹಾಲು ಉತ್ಪಾದಕರ ಸಹಕಾರ ಸಂಘವನ್ನು ತೆರೆಯಲು ಕೆ. ಎಂ. ಎಫ್.ನವರು ಕ್ರಮ ಜರುಗಿಸಿರುತ್ತಾರೆ.

ಇ) ಪಶುವೈದ್ಯ ಶಾಲೆ ತೆರೆಯದಿರಲು ಕಾರಣಗಳು ಉದ್ಭವಿಸುವುದಿಲ್ಲ. ಆದರೆ ಇಡಗೂರು ಗ್ರಾಮವು ಮಾವಿನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಂಘದ ಕಾರ್ಯವ್ಯಾಪ್ತಿಯಿಂದ ಬಿಡುಗಡೆಯಾದನಂತರ ಈ ಗ್ರಾಮದಲ್ಲಿ ಹಾಲಿನ ಡೈರಿಯನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಜಿ.ಎಸ್. ಶಿವನಂಜಪ್ಪ:– ಮಾನ್ಯ ಅಧ್ಯಕ್ಷರೆ, ಈ ಗುಬ್ಬಿ ತಾಲ್ಲೂಕು ಸಿ.ಎಸ್. ಪುರ ಹೋಬಳಿಯಲ್ಲಿನ ಇಡಗೂರು ಗ್ರಾಮ ಬಹಳ ಹಿಂದುಳಿದ ಗ್ರಾಮವಾಗಿದೆ. ಒಂದು ಕಡೆ ಈ ಊರಿಗೆ ಕುಣಿಗಲ್ 22ಕಿ.ಮೀ. ಆಗುತ್ತದೆ. ಮತ್ತು ಸಿ.ಎಸ್. ಪುರ 20ಕಿ.ಮೀ. ಆಗುತ್ತದೆ. ಈ ಮಧ್ಯದಲ್ಲಿರತಕ್ಕ ಹಳ್ಳಿಯು ಎಲ್ಲಾ ಸೌಲಭ್ಯದಿಂದಲೂ ವಂಚಿತವಾಗಿದೆ. ಈ ಊರಿಗೆ ಒಂದು ಪಶು ವೈದ್ಯಶಾಲೆ, ಹಾಗೂ ಹಾಲು ಉತ್ಪಾದಕರ ಸಂಘವನ್ನು ಸ್ಥಾಪನೆ ಮಾಡಲಿಕ್ಕೆ ಸಹಾಯ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಕೆ. ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಗೆ 193 ಪಶು ಚಿಕಿತ್ಸಾಲಯಗಳು ಬೇಕಾಗಿವೆ. 119 ಈಗ ಇದೆ. ಇನ್ನು 74 ಮಾಡಬೇಕಾಗಿದೆ. ಈ ವರ್ಷ 93–94ಕ್ಕೆ ಪ್ರೈಮರಿ ವೆಟರ್ನರಿ ಸೆಂಟರನ್ನು ಸ್ಥಾಪಿಸಲು ಪರಿಶೀಲಿಸಲಾಗುವದು. ಡೈರಿ ಬಗ್ಗೆ ಕೇಳಿದ್ದಾರೆ. ಈ ರಾಜ್ಯದಲ್ಲಿ 93–94ಕ್ಕೆ 300 ಹಾಲು ಸಹಕಾರ ಸಂಘಗಳನ್ನು ಪ್ರಾರಂಭಿಸಬೇಕು ಎನ್ನುವುದು ನಮ್ಮ ಬಡ್ಜೆಟ್‌ನಲ್ಲಿ ಇದೆ. ಅದೇ ಪ್ರಕಾರ ಇಡಗೂರು ಗ್ರಾಮವನ್ನೂ ಪ್ರಾರಂಭಿಸಲಾಗುವುದು.

ಶ್ರೀ ಜಿ.ಎಸ್. ಶಿವನಂಜಪ್ಪ:– ಅಧ್ಯಕ್ಷರೇ, ಪಶು ವೈದ್ಯಶಾಲೆಗಳ ಬಗ್ಗೆ ಪರಿಶೀಲಿಸಲಾಗುವುದೆಂದು ಹೇಳುತ್ತಿದ್ದಾರೆ. ಇದು ಸರಿಯಾದ ಉತ್ತರ ಅಲ್ಲವೆಂದು ನನ್ನ ಭಾವನೆ. ಏಕೆಂದರೆ ಕುಣಿಗಲ್ ಕಡೆ ಹೋಗಬೇಕಾದರೆ 22 ಕಿ.ಮೀ. ಈ ಕಡೆ ಬರಬೇಕಾದರೆ 20 ಕಿ.ಮೀ. ದನಗಳು ಯಾವ ರೀತಿ ಅವು ಚಿಕಿತ್ಸೆ ಪಡೆಯಬೇಕು ಎನ್ನತಕ್ಕದ್ದು ನಮ್ಮ ಮಾನ್ಯ ಮಂತ್ರಿಗಳಿಗೆ ಚೆನ್ನಾಗಿ ಅರ್ಥವಾಗಿದೆ. ಮತ್ತೆ ಪರಿಶೀಲನೆ ಮಾಡುವ ಪ್ರಶ್ನೆ ಇಲ್ಲ. ದಯಮಾಡಿ ಈ ವರ್ಷ ಅದನ್ನು ಮಂಜೂರು ಮಾಡಿಕೊಡುತ್ತೀರೋ ?